International Journal of Kannada Research 2022; 8(4): 54-57

International Journal of Kannada Research
www.kannadajournal.com

ISSN: 2454–5813
IJKR 2022; 8(4): 54-57
© 2022 IJKR
www.kannadajournal.com
Received: 17-09-2022
Accepted: 19-10-2022

**ಡಾ.ಎಸ್.ಶಶಿರೇಖಾ**
ಕನ್ನಡ ಸಹ ಪ್ರಾಧ್ಯಾಪಕರು,
ಸರ್ಕಾರಿ ವಿಜ್ಞಾನ ಕಾಲೇಜು,
ನೃಪತುಂಗ ವಿಶ್ವವಿದ್ಯಾಲಯ,
ನೃಪತುಂಗ ರಸ್ತೆ, ಬೆಂಗಳೂರು,
ಕರ್ನಾಟಕ, ಭಾರತ

Corresponding Author:
**ಡಾ.ಎಸ್.ಶಶಿರೇಖಾ**
ಕನ್ನಡ ಸಹ ಪ್ರಾಧ್ಯಾಪಕರು,
ಸರ್ಕಾರಿ ವಿಜ್ಞಾನ ಕಾಲೇಜು,
ನೃಪತುಂಗ ವಿಶ್ವವಿದ್ಯಾಲಯ,
ನೃಪತುಂಗ ರಸ್ತೆ, ಬೆಂಗಳೂರು,
ಕರ್ನಾಟಕ, ಭಾರತ

# ವೈದೇಹಿ ಅವರ ಕಥೆಗಳಲ್ಲಿ ಸ್ತ್ರೀ ಕೇಂದ್ರಿತ ನಿಲುವುಗಳು

**ಡಾ.ಎಸ್.ಶಶಿರೇಖಾ**

ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರದಲ್ಲಿ ಹುಟ್ಟಿ ಬೆಳೆದು ಅಲ್ಲಿನ ಭಾಷೆಯನ್ನು ಮೈಗೂಡಿಸಿಕೊಂಡು ಸ್ತ್ರೀಪರ ಕಾಳಜಿಗಳನ್ನು, ಸ್ತ್ರೀಯರ ಅದ್ಭುತ ಅನುಭವಗಳ ಲೋಕವನ್ನು ಕಥೆಗಳಲ್ಲಿ ತೆರೆದಿಡುವಲ್ಲಿ ಯಶಸ್ವಿಯಾದವರು ವೈದೇಹಿ. ಸ್ತ್ರೀಯರ ಮನಸ್ಸಿನ ಒಳತೋಟಿಗಳನ್ನು, ದುಗುಡ ದುಮ್ಮಾನಗಳನ್ನು, ಆಸೆ ಅನುರಾಗಗಳ ಭಾವಲೋಕವನ್ನು, ಕೌಟುಂಬಿಕ ಜಗತ್ತಿನ ಪರಿಧಿಯಲ್ಲಿ ಅನುಭವಿಸುವ ಸುಖ ದುಃಖಗಳನ್ನು ವೈದೇಹಿಯವರು ಕಥೆಗಳಲ್ಲಿ ಚಿತ್ರಿಸಿದ್ದಾರೆ. ಕೌಂಟುಂಬಿಕ ಜಗತ್ತಿನಲ್ಲಿ ಮನೆಯ ಒಳಗೆ ಬಹುಪಾಲು ಜೀವನವನ್ನು ಸವೆಸುವ ಹೆಂಗಸರು, ಆಧುನಿಕ ಜಗತ್ತಿನಲ್ಲಿ ವಿದ್ಯೆಯನ್ನು ಗಳಿಸಿ ಸಮಾಜದಲ್ಲಿ ಉದ್ಯೋಗ ಪಡೆದ ಸ್ತ್ರೀಯರು, ಕೌಟುಂಬಿಕ ವ್ಯವಸ್ಥೆಯಲ್ಲಿ ಬದುಕು ರೂಪಿಸಿಕೊಳ್ಳಲಾಗದೆ ನರಳುವ ಸ್ತ್ರೀಯರು ಎಲ್ಲರೂ ವೈದೇಹಿಯವರ ಕಥೆಯ ಪಾತ್ರವಾಗಿದ್ದಾರೆ. ಈ ಹೆಂಗಸರ ನೋವು ನಿರಾಸೆ, ಬವಣೆ, ಹಿಂಸೆ ಶೋಷಣೆಗಳ ಒಳ ಹೊರ ಮುಖಗಳನ್ನು ಕಥೆಗಳಲ್ಲಿ ಅನಾವರಣಗೊಳಿಸುವ ಕಥೆಗಾರ್ತಿ ಹೆಣ್ಣುಮಕ್ಕಳ ಸಾಮಾಜಿಕ ಸ್ಥಿತಿಗತಿಗಳನ್ನು ವಿಶೇಷವಾಗಿ ಕುಂದಾಪುರದ ಸ್ತ್ರೀಯರ ಬದುಕನ್ನು ಅನಾವರಣಗೊಳಿಸಿ ಸ್ತ್ರೀಯರ ಬದುಕಿನ ಸಾಕ್ಷಿಪ್ರಜ್ಞೆಯನ್ನು ಕಥೆಗಳಲ್ಲಿ ದಾಖಲಿಸಿದ್ದಾರೆ. ಮನಸ್ಸಿನ ಒಳತೋಟಿಗಳನ್ನು ದುಗುಡಗಳನ್ನು ಉಪಶಮನ ಮಾಡಿಕೊಳ್ಳುವ ಹಂಬಲದೊಂದಿಗೆ ಬರಹವನ್ನು ಪ್ರಾರಂಭಿಸಿದ ವೈದೇಹಿಯವರು ತುಂಬ ನಿರಾಡಂಬರವಾಗಿ ಸೃಜನಶೀಲತೆಗೆ ತೊಡಗಿಸಿಕೊಂಡು, ತಮ್ಮ ಬರಹಗಳ ಬಗ್ಗೆ ತಮಗೆ ಭ್ರಮೆಗಳಿಲ್ಲವೆಂದು ಓದುಗರಿಗೆ ವಿನಮ್ರವಾಗಿ ಮನದಟ್ಟು ಮಾಡುತ್ತಾ, ಸ್ತ್ರೀಯರ ಮನಸ್ಸಿನಾಳದ ವಿಚಾರಗಳನ್ನು, ನಂಬಿಕೆಗಳನ್ನು, ವ್ಯವಸ್ಥೆಯ ವಿರುದ್ಧದ ನಮ್ರ ಕಿಡಿಗಳನ್ನು ದಾಖಲಿಸಿದ್ದಾರೆ.

**ಭಾರತೀಯ ಸಮಾಜದಲ್ಲಿ ಮಹಿಳೆ**

ಭಾರತೀಯ ಸಮಾಜದಲ್ಲಿ ಅನಾದಿ ಕಾಲದಿಂದಲೂ ಸಾಂಸ್ಕೃತಿಕ ಯಜಮಾನ್ಯದ ಜೊತೆಗೆ ಪುರುಷ ಪ್ರಾಧಾನ್ಯತೆಯ ಲಿಂಗ ತಾರತಮ್ಯವೂ ಸಮಾಜದಲ್ಲಿ ಬೇರೂರಿದೆ. ಸ್ತ್ರೀ–ಪುರುಷ ಇಬ್ಬರೂ ಮಾನವ ಕುಲದ ಮುಂದುವರಿಕೆಗೆ ಕಾರಣರಾಗಿದ್ದರೂ, ಪುರುಷನೇ ಪ್ರಮುಖ ಸ್ಥಾನವನ್ನು ಅಲಂಕರಿಸಿದ್ದಾನೆ. ಸ್ತ್ರೀ ಅಲಕ್ಷಿತಳಾಗಿಯೇ ಉಳಿದಿದ್ದಾಳೆ. ಸ್ತ್ರೀವಾದಿ ಚಿಂತಕಿ ಸಿಮನ್‌ಬೋವಾ ಸ್ತ್ರೀ ದ್ವಿತೀಯ ದರ್ಜೆಯ ಪ್ರಜೆಯಾಗಿ ಪರಿಗಣಿಸಲ್ಪಟ್ಟಿದ್ದಾಳೆ ; ಇಂತಹ ಲಿಂಗಭೇದ ಸ್ತ್ರೀಗೆ ಮಾತ್ರವಲ್ಲದೆ, ಇಡೀ ಸಮಾಜಕ್ಕೆ ಹಾನಿಕಾರಕ ಎಂದು ವ್ಯಾಖ್ಯಾನಿಸಿದ್ದಾರೆ. ಪುರುಷ ತಾನು 'ಮಾನವ' ಎಂದು ಕರೆದುಕೊಂಡು ಸ್ತ್ರೀಯನ್ನು 'ಹೆಣ್ಣು' ಎಂದು ಚೌಕಟ್ಟು ಹಾಕಿ ತೋರಿಸಿದ್ದಾನೆ. ಪುರುಷನಿಗೆ ಸ್ವತಂತ್ರ ಅಸ್ತಿತ್ವವಿದೆ, ಆದರೆ ಸ್ತ್ರೀಗೆ ಸ್ವತಂತ್ರ ಅಸ್ತಿತ್ವವಿಲ್ಲ. ಪುರುಷನ ನೆರಳಿನಲ್ಲಿ ಸ್ತ್ರೀ ಅಸ್ತಿತ್ವರಹಿತಳಾಗಿ ಕಳೆದುಹೋಗಿದ್ದಾಳೆ. ಪುರುಷ ತನ್ನ ಎಲ್ಲಾ ಅವಶ್ಯಕತೆಗಳ ಸಾಕಾರಕ್ಕೆ ಸ್ತ್ರೀಯನ್ನು ಬಳಸಿಕೊಳ್ಳುತ್ತಾನೆ. ಸ್ತ್ರೀಯ ಸಂಪೂರ್ಣ ಬೆಂಬಲ ಮತ್ತು ಸಮರ್ಪಣೆ ಪುರುಷನ ವ್ಯಕ್ತಿತ್ವಕ್ಕೆ ಹೊಳಪು ತರುತ್ತದೆ. ಆದರೆ ಅಂಥ ಲಾಭ ಪಡೆದ ಪುರುಷ ಸ್ತ್ರೀಯಿಂದ ಸಿಕ್ಕ ಬೆಂಬಲ, ಪ್ರೋತ್ಸಾಹ, ಸಹಭಾಗಿತ್ವ ಮರೆತು ಅವಳಿಗೆ ಕಟ್ಟುಪಾಡುಗಳನ್ನು ನಿರ್ಮಿಸಿ ಧಾರ್ಮಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಕೆಳದರ್ಜೆಯಲ್ಲಿ ಪರಿಗಣಿಸಿ ಸ್ತ್ರೀ ಪರಕೀಯ ಭಾವದಿಂದ ನರಳುವಂತೆ ಮಾಡಿದ್ದಾನೆ. ಪುರುಷ ನಿರ್ಮಿತ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆ ಒಂದು ಭೋಗ ವಸ್ತುವಾಗಿ, ಸೇವಕಿಯಾಗಿ ಬಂಧಿಸಲ್ಪಟ್ಟಿದ್ದಾಳೆ. ಪುರಾಣ ಕಥೆಗಳು ಮತ್ತು ಮಹಾಕಾವ್ಯಗಳು ಕೂಡ ಈ ರೀತಿ ಸ್ತ್ರೀ ಮಾದರಿಗಳನ್ನೇ ಕೊಡುತ್ತವೆ. ಕುಟುಂಬ ವ್ಯವಸ್ಥೆಯಲ್ಲಿ ತಾಯಿ, ಹೆಂಡತಿ, ಮಗಳು, ಸಹೋದರಿ ಮುಂತಾದ ಸಂಬಂಧಗಳು ಪುರುಷನ ಸುತ್ತಲೂ ಆವರಿಸಿ ಆತನ ಬದುಕನ್ನು ಅರ್ಥಪೂರ್ಣಗೊಳಿಸಿದ್ದರೂ ಇವರಾರಿಗೂ ಆತ ಸ್ವಂತ ವ್ಯಕ್ತಿತ್ವವನ್ನು ಕಂಡುಕೊಳ್ಳಲು

ಅವಕಾಶ ನೀಡಿಲ್ಲ. ಒಂದು ರೀತಿಯಲ್ಲಿ ಎಲ್ಲಾ ಸ್ತ್ರೀಯರೂ ಶೋಷಿತ ಸಮಾಜದ ಸದಸ್ಯರೇ. ಪುರುಷ ನಿರ್ಮಿತ ಚರಿತ್ರೆಯಲ್ಲಿ ಸ್ತ್ರೀ ಅಸ್ತಿತ್ವ ರಹಿತಳು ಎಂಬುದೇ ವಿಷಾದದ ಸಂಗತಿ.

**ವೈದೇಹಿಯವರ ಕಥೆಗಳಲ್ಲಿ ಸ್ತ್ರೀ ಚಿತ್ರಣದ ಬಗೆ**

ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರದಲ್ಲಿ ಹುಟ್ಟಿ ಬೆಳೆದ ವೈದೇಹಿ ಕನ್ನಡ ಸಾಹಿತ್ಯದಲ್ಲಿ ವಿಭಿನ್ನ ಮಾದರಿಯ ಕಥೆಗಳನ್ನು ರಚಿಸಿದ್ದಾರೆ. ಕೌಟುಂಬಿಕ ಜಗತ್ತಿನ ನಾಲ್ಕು ಗೋಡೆಗಳ ಒಳಗೆ ಹೆಂಗಸರ ಬವಣೆ, ಬದುಕಿನ ಹಿಂಸೆಯ ಒಳಗೇ ನಗುವ, ನರಳುವ ಒಳ ಮತ್ತು ಹೊರಮುಖಗಳ ಬದುಕನ್ನು ವಿಶಾಲ ದೃಷ್ಟಿಕೋನದಿಂದ ನೋಡುವ ವೈದೇಹಿ ಅವರು ತಮ್ಮ ಸಾಹಿತ್ಯದ ಮೂಲಕ ಹಿಡಿಯಾಗಿ ಚಿತ್ರಿಸುವಲ್ಲಿ ಯಶಸ್ವಿಯಾಗಿದ್ದಾರೆ. ಜೀವನದ ನಿಜಗಳನ್ನು , ಪುರುಷ ಮತ್ತು ಸ್ತ್ರೀಯರ ನಡುವಿನ ತಾರತಮ್ಯಗಳನ್ನು , ವಿರೋಧಾಭಾಸಗಳನ್ನು , ಕುಟುಂಬ ಜೀವನದ ಸಂಕಷ್ಟಗಳ ಬಿಸಿ, ವಿಷಾದ, ವಿನೋದ, ಗಾಂಭೀರ್ಯಗಳನ್ನು ತಮ್ಮ ಕಥೆಗಳ ಮೂಲಕ ವಿವರಿಸಿದ್ದಾರೆ. ವೈದೇಹಿ 'ಮರ ಗಿಡ ಬಳ್ಳಿ', 'ಅಂತರಂಗದ ಪುಟಗಳು', 'ಗೋಲ', 'ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ' ಮತ್ತು 'ಕ್ರೌಂಚ ಪಕ್ಷಿಗಳು' ಎಂಬ ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಸಂಪ್ರದಾಯಸ್ಥ ಪರಿಸರದೊಳಗೆ ಬದುಕಬೇಕಾದ ಅನಿವಾರ್ಯತೆಯಲ್ಲಿ ಹೆಣ್ಣಿನ ಅನುಭವಗಳು, ವಿಭಿನ್ನ ಗ್ರಹಿಕೆಗಳು, ಜೀವನ ಅರಳುವ ಇಲ್ಲವೇ ಮುರುಟಿ ಹೋಗುವ ಬಗೆಗಳನ್ನು ಅವರ ಸ್ವಂತ ಪರಿಸರದಲ್ಲಿಯೇ ಗ್ರಹಿಸಿ ಕಥೆ ರಚಿಸುವ ಪರಿ ಶ್ಲಾಘನೀಯವಾದುದಾಗಿದೆ.

**ವೈದೇಹಿ ಅವರ ಕಥೆಗಳಲ್ಲಿ ಸ್ತ್ರೀ ಕೇಂದ್ರಿತವಾದ ಅನಾವರಣ**

ಭಾರತೀಯ ಸಮಾಜದಲ್ಲಿ ಮಹಿಳೆಯನ್ನು ಅರ್ಥಮಾಡಿಕೊಳ್ಳಲು ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರವನ್ನು ಗಮನಿಸಬೇಕಾಗುತ್ತದೆ. ಸಾಹಿತ್ಯ ಸಾಂಸ್ಕೃತಿಕ ವಾಹಕತೆಗೆ ಜೀವಸೆಲೆಯಾಗಿ ಸಾಮಾಜಿಕ ಮತ್ತು ಚಾರಿತ್ರಿಕ ಅಂಶಗಳನ್ನು ಎಳೆಎಳೆಯಾಗಿ ದಾಖಲಿಸುತ್ತವೆ. ಸಮಾಜ ಮತ್ತು ಸಂಸ್ಕೃತಿಗಳು ಜೀವನದ ದೃಷ್ಟಿಕೋನ, ತಲ್ಲಣಗಳು, ವಿವಿಧ ಶೋಷಿತ ಮುಖಗಳು, ಭಾವನೆಗಳ ಧಮನಕಾರಿ ಪರಿಸ್ಥಿತಿ, ವಿರುದ್ಧ ನಿಲುವುಗಳು, ಎಲ್ಲದರ ನಡುವೆ ಅವಳ ಜೀವನ ಸಾತತ್ಯ ಮತ್ತು ಮೌಲ್ಯಗಳನ್ನು ವಿವರಿಸುತ್ತವೆ. ಹೆಣ್ಣು ತನ್ನನ್ನು ಪುರುಷಪ್ರಧಾನ ಸಮಾಜದಲ್ಲಿ ಕೌಟುಂಬಿಕ ಕೆಲಸಗಳ ನಡುವೆ ಅಡಗಿಸಿಕೊಂಡು ಬದುಕಿದರೂ ಹಾಡು, ಹಸೆ, ಕಸೂತಿ, ಅಡುಗೆ, ನೂಲಿನಿಂದ ಎಣೆಯುವ ವಿಭಿನ್ನ ಕಲೆ, ಒಲಿಗೆ ಮೊದಲಾದ ಕೆಲಸಗಳಲ್ಲಿ ತೊಡಗಿಸಿಕೊಂಡು ತನ್ನೊಳಗಿನ ಕಲೆಯನ್ನು ಸಮಾಜದ ಮುಂದೆ ಸಾಕ್ಷೀಕರಿಸಿ ಹೆಣ್ಣು ಅಡುಗೆ ಕೆಲಸಕ್ಕೆ ಮತ್ತು ಮಕ್ಕಳನ್ನು ಹೆರಲು ಮಾತ್ರ ಸೀಮಿತವಲ್ಲ, ಎಲ್ಲ ಕ್ಷೇತ್ರಗಳಲ್ಲಿ ಪುರುಷನಿಗೆ ಸಮಾನವಾಗಿ ನಿಂತು ಸಾಧಿಸಬಲ್ಲಳು ಎಂದು ಸಾಬೀತು ಮಾಡಿದ್ದಾಳೆ. ಆಧುನಿಕ ಪರಿಸರ ಮತ್ತಷ್ಟು ಅವಕಾಶಗಳನ್ನು ಮಹಿಳೆ ಒದಗಿಸಿಕೊಟ್ಟಿದೆ.

ವೈದೇಹಿ ಅವರ 'ಮರ ಗಿಡ ಬಳ್ಳಿ', 'ಅಂತರಂಗದ ಪುಟಗಳು', 'ಗೋಲ', 'ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ' ಮತ್ತು 'ಕ್ರೌಂಚ ಪಕ್ಷಿಗಳು' ಕಥಾಸಂಕಲನದ ಬಹುಪಾಲು ಕಥೆಗಳು ಸ್ತ್ರೀ ಕೇಂದ್ರೀತ ನಿಲುವುಗಳಿಗೆ ಪ್ರಾಶಸ್ಯ ನೀಡಿವೆ. ಗಂಡಸರು ತಮ್ಮನ್ನು ತಾವು ಪ್ರಧಾನರೆಂದು ಭ್ರಮಿಸುತ್ತಾರೆ. ಹೆಣ್ಣು ತನ್ನ ಅಧೀನವೆಂದು ಭಾವಿಸುತ್ತಾರೆ, ಹೆಂಗಸರೂ ಇದೇ ರೀತಿ ನಂಬಬೇಕೆಂದು ಒತ್ತಾಯಿಸುತ್ತಾರೆ. ಗಂಡುತನದ ದರ್ಪ ಅಹಂಕಾರ ಸ್ತ್ರೀಯರ ಜೀವನವನ್ನು ಸಂಕಟಕ್ಕೆ ಸಿಲುಕಿಸುವ ಪರಿ ವೈದೇಹಿ ಅವರ ಕಥಾನಕಗಳಲ್ಲಿ ಚಿತ್ರಣಗೊಂಡಿದೆ. ಪಿತೃ ಪ್ರಧಾನತೆಯನ್ನು ಒಪ್ಪಿಕೊಳ್ಳುವ ಮಹಿಳೆಯರು, ಪಿತೃ ಪ್ರಧಾನತೆಯನ್ನು ವಿರೋಧಿಸುವ ಮಹಿಳೆಯರು, ಆತ್ಮಾಭಿಮಾನದ ಸಾಧಕ ಮಹಿಳೆಯರು ವೈದೇಹಿಯವರ ಕಥೆಗಳಲ್ಲಿ ಸಹಜ ಸ್ವಭಾವಗಳೊಂದಿಗೆ ಚಿತ್ರಣಗೊಂಡಿದ್ದಾರೆ. 'ಮರ ಗಿಡ ಬಳ್ಳಿ' ಮತ್ತು 'ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ' ಸಂಕಲನದಲ್ಲಿ ಬರುವ ಕಥೆಗಳಲ್ಲಿ ಲೇಖಕಿ ಹೆಣ್ಣನ್ನು ಕೇಂದ್ರವಾಗಿಟ್ಟುಕೊಂಡು ಹೆಣ್ಣಿನ ಅನುಭವದ ನೆಲೆ, ಬದುಕಿನ ಕಾಳಜಿ, ಕುತೂಹಲಾತ್ಮಕ ಪರಿಚಲನೆಯಲ್ಲಿ ವಿಶಿಷ್ಟ ಸ್ತ್ರೀ ಪ್ರವೃತ್ತಿಗಳನ್ನು ವಿಭಿನ್ನ ದೃಷ್ಟಿಕೋನಗಳೊಂದಿಗೆ ವ್ಯಾಖ್ಯಾನಿಸಿದ್ದಾರೆ. ಹೆಣ್ಣು ವ್ಯವಸ್ಥೆಯನ್ನು ಎಚ್ಚರದಿಂದ ಕಾಣುವ, ಗ್ರಹಿಸುವ, ಭಾವನೆಗಳಿಗೆ ಸ್ಪಂದಿಸುವ ರೀತಿ ಆಕೆಯನ್ನು ಮಾನವೀಯತೆಯ ಸಾಕಾರ ಮೂರ್ತಿಯಾಗಿಸುತ್ತದಲ್ಲದೆ, ಸಮಸ್ಥಿತ ದೃಷ್ಟಿ ತೋರಿಸುತ್ತದೆ. ಬಾಲ್ಯ, ಹರೆಯ, ಪ್ರೌಢತ್ವ , ನಡುಹರೆಯ ಮತ್ತು ವೃದ್ಧಾಪ್ಯದ ಹೆಣ್ಣಿನ ವಿವಿಧ ಘಟ್ಟಗಳನ್ನು ಚಿತ್ರಿಸಿರುವ ಲೇಖಕಿ ತಾಯಿ, ಮಗಳು, ಅಜ್ಜಿ ,ಅತ್ತೆ, ಸೊಸೆ, ಅಕ್ಕ, ತಂಗಿ, ಅತ್ತಿಗೆ, ನಾದಿನಿ ಮೊದಲಾದ ಕೌಟುಂಬಿಕ ಸಂಬಂಧಗಳಲ್ಲಿ ಬದುಕುವ ಹೆಣ್ಣಿನ ವಿಸ್ಮಿತ ಭಾವಲೋಕವನ್ನು ಅನಾವರಣಗೊಳಿಸಿದ್ದಾರೆ.

'ಕ್ರೌಂಚ ಪಕ್ಷಿಗಳು' ಕಥಾಸಂಕಲನದಲ್ಲಿಯೂ ಎಲ್ಲ ಕಥೆಗಳ ಕೇಂದ್ರ ಪಾತ್ರ 'ಸ್ತ್ರೀ'. ಈ ಕಥಾ ಸಂಕಲನದಲ್ಲಿ 'ದಾಳಿ', 'ನಟಿ', 'ಸಬಿತಾ', 'ಮಾತು ಸೋತ ಕ್ಷಣ', 'ಮನೆಯವರೆಗಿನ ಹಾದಿ', 'ಪ್ರಶ್ನೆ' 'ಒಗಟು' 'ಅವರರವರ ಭಾವಕ್ಕೆ', 'ತೆರೆಯದ ಪುಟಗಳು', 'ಕ್ರೌಂಚ ಪಕ್ಷಿಗಳು' ಎಂಬ ಹತ್ತು ಕಥೆಗಳನ್ನು ನೋಡಬಹುದಾಗಿದೆ. ಸ್ತ್ರೀ ಕೇಂದ್ರಿತ ಕಥೆಗಳಾದ ಇವು ಹೆಣ್ಣಿನ ಅಸ್ಥಿತ್ವದ ಹುಡುಕುಗಳನ್ನು ದಾಖಲಿಸುತ್ತವೆ. ಹೆಣ್ಣು – ಗಂಡಿನಿಂದ ರಚನೆಯಾಗುವ ಕುಟುಂಬ ವ್ಯವಸ್ಥೆಯಲ್ಲಿ ಸುಖವೂ ಇದೆ, ವಿನೋದ, ಗಾಂಭೀರ್ಯ, ಸಂತೋಷ, ದುಃಖಗಳ ಮೈತ್ರಿಯಿರುತ್ತದೆ. ಜೀವನ ಕೂಡ ಎಲ್ಲವನ್ನೂ ಒಳಗೊಂಡು ಏನೂ ಇಲ್ಲವೆಂಬಂತೆ ಗಂಡು ಹೆಣ್ಣುಗಳೆಂಬ ಬೇಧವಿಲ್ಲದೆ ಎಲ್ಲರ ಬದುಕು ಪೂರ್ಣತೆ ಮತ್ತು ಅಪೂರ್ಣತೆಗಳ ಮಧ್ಯೆ ಮಿಂದು , ಜರ್ಜರಿತ ಭಾವದಿಂದ ತುಂಬಿ ನಿಧಾನವಾಗಿ ಎಲ್ಲವನ್ನು ಸಹಿಸುವ ಭಾವಕ್ಕೆ ತಂದು ನಿಲ್ಲಿಸುವ ಪರಿಯನ್ನು ಕಟ್ಟಿಕೊಡುವ ವೈದೇಹಿಯವರ ಕಥೆಗಳು ಪ್ರಸ್ತುತ ಆಧುನಿಕ ಸಂದರ್ಭದ ಮಾನವೀಯ ತೊಳಲಾಟಗಳನ್ನು ಚಿತ್ರಿಸುವಲ್ಲಿ ಸಫಲವಾಗಿವೆ.

'ದಾಳಿ' ಕಥೆಯಲ್ಲಿ ಕಂಡಕ್ಟರ್ ಒಬ್ಬ ಒಂದು ಹೆಂಗಸಿನ ಮೇಲೆ ದಬ್ಬಾಳಿಕೆ ನಡೆಸುವ ಚಿತ್ರಣವಿದೆ. ಸೀಟು ಕೊಡಲು ಕೇಳುವ ಹೆಂಗಸನ್ನು ಅವಮಾನಿಸುವ ಕಂಡಕ್ಟರ್ ಮೊದಲಿನಿಂದ ಕೊನೆಯವರೆಗೆ ಆಕೆಯನ್ನು ಹೀಯಾಳಿಸಿ ಮಾತನಾಡುತ್ತಾನೆ. **'ನಟಿ'** ಸಂಪ್ರದಾಯಸ್ತ ಬ್ರಾಹ್ಮಣ ಸಮಾಜದ ಒಳಗಿನ ಹೆಣ್ಣಿನ ಕಥನ. 'ನಟಿ' ಕಥೆಯಲ್ಲಿ ಕುಂದಾಪುರದ ಬ್ರಾಹ್ಮಣ ಸಮುದಾಯದ ಆಚರಣೆ ಮತ್ತು ಸಂಸ್ಕೃತಿಯ ಚಿತ್ರಣವಿದೆ. ಯಾರನ್ನಾದರೂ ಮಾತು ಮತ್ತು ಅಭಿನಯದ ಮೂಲಕ ಕಣ್ಣೆದುರು ಕಟ್ಟಿ ನಿಲ್ಲಿಸಿಕೊಡುವುದನ್ನು 'ಪಾರ್ಸು' ಎಂದು ಕರೆಯುತ್ತಾರೆ. ಪಾರ್ಸು ಮಾಡುವುದರಲ್ಲಿ ಗುರುತಿಸಿಕೊಂಡಿದ್ದ ರತ್ನ ಎಲ್ಲರನ್ನು ತನ್ನ ಪಾರ್ಸಿನ ಮೂಲಕ ರಂಜಿಸುತ್ತಾಳೆ. 'ಕೋಟೆ ಅಜ್ಜಿ ಗುಡ್ಡಕ್ಕೆ ಹೋಗಿ ಬಂದದ್ದು' , 'ರುಕ್ಮಿಣಿ ಚಿಕ್ಕಿ ಪಾರ್ಸು', 'ವಡ್ಡರ್ಸೆ ವನಜಾಕ್ಷಮ್ಮನ ಪಾರ್ಸು' ಮುಂತಾದ ಪಾರ್ಸುಗಳನ್ನು ಮಾಡುತ್ತಾ ಎಲ್ಲರನ್ನು ನಗಿಸುತ್ತಿದ್ದ ರತ್ನ ತನ್ನನ್ನು ಕೂಡಾ ಪಾರ್ಸು ಮಾಡಿ ತೋರಿಸುತ್ತಾಳೆ. ಅವಳ ಪಾರ್ಸಿನ ಸಂದರ್ಭದಲ್ಲಿ ಅದನ್ನು ರಂಜನೆಗಾಗಿ ನೋಡುತ್ತಿದ್ದ ಹೆಂಗಸರು ರತ್ನಾಳ ಜೀವನದ ಕುರಿತು, ಸಂಸಾರ , ಮಗಳು, ಗಂಡನಿಗೆ ಸಂಬಂಧಿಸಿದ ಅನೇಕ ಪ್ರಶ್ನೆಗಳನ್ನು ಕೇಳುತ್ತಾರೆ. ರತ್ನ ಅತ್ಯಂತ ನೋವಿನಿಂದ ಕ್ಷಣ ಮಂಕಾದರೂ ಧೈರ್ಯವಾಗಿ ಉತ್ತರಿಸುತ್ತಾಳೆ. ಬೇಜವಾಬ್ದಾರಿ ಗಂಡ, ಕಾಯಿಲೆಯ ಮಗಳು, ನೌಕರಿಗಾಗಿ

ಅಲೆದಾಡುವ ಮಗನ ಕುರಿತು ತಿಳಿಸುತ್ತಾಳೆ. ಮಗಳ ಜಿತೆಗೆ ಬೆಂಕಿ ಕೊಟ್ಟ ಬಗ್ಗೆ ಪ್ರಶ್ನಿಸಿದಾಗ ರತ್ನ ತಾನು ಹೆಣ್ಣಾದರೆ ಏನಂತೆ ನಾನು ತಾಯಿ, ನನ್ನ ಮಗಳಿಗೆ ನಾನು ಬೆಂಕಿ ಕೊಟ್ಟರೆ ತಪ್ಪೇನು? ಮರು ಪ್ರಶ್ನೆ ಹಾಕುತ್ತಾಳೆ. ಪಾರ್ಸಿನ ಮೂಲಕ ಬ್ರಾಹ್ಮಣ ಸಮುದಾಯದ ಮಡಿಯನ್ನು, ಹೆಂಗಸರ ವಿಪರೀತ ನಡವಳಿಕೆಗಳನ್ನು ಅಣಕಿಸುವುದಲ್ಲದೇ ತನ್ನ ಜೀವನದ ಸ್ಥಿತಿಗೆ ನೊಂದು ತನ್ನ ಸಮುದಾಯದ ಆಚರಣೆಗೆ ವಿರುದ್ಧ ನಿಂತು ಎಲ್ಲರನ್ನು ಮಣಿಸುತ್ತಾಳೆ. ಪಾರ್ಸು ಮಾಡುವಲ್ಲಿ ಒಳ್ಳೆಯ ನಟಿ ಎನಿಸುತ್ತಾಳೆ. ನಿಜ ಜೀವನದಲ್ಲಿಯೂ ದಿಟ್ಟ ನಿರ್ಧಾರಗಳನ್ನು ತೆಗೆದುಕೊಂಡು ಎಲ್ಲರ ಅಚ್ಚರಿಗೆ ಕಾರಣವಾಗುತ್ತಾಳೆ 'ಪ್ರಶ್ನೆ' ಕಥೆಯಲ್ಲಿ ಭಾಷಣಕಾರನೊಬ್ಬನ ಭಾಷಣ ಕೇಳುತ್ತಿದ್ದ ಜನತೆ ಅನೇಕ ಪ್ರಶ್ನೆಗಳನ್ನು ಕೇಳುತ್ತಾರೆ. ಅಲ್ಲಿದ್ದ ಭುವಿ ಮತ್ತು ಅನು ಎಂಬ ಹುಡುಗಿಯರು ಆತನ ಮಾತು ಕೇಳುತ್ತಾ ಕೇಳುತ್ತಾ ಆತನ ಆಕರ್ಷಣೆಗೆ ಒಳಾಗುತ್ತಾರೆ. ಆತನ ಜೊತೆ ಒಂದು ರಾತ್ರಿ ಅಥವಾ ಒಂದು ಗಂಟೆ ಕಳೆಯಲು ಬಯಸಿದ್ದೇನೆ.. ಏನು ಹೇಳುತ್ತೀರಿ ಎಂದು ಪ್ರಶ್ನೆ ಕಳಿಸಿ ತಮಾಷೆ ನೋಡುತ್ತಾರೆ. ಈ ರೀತಿಯ ಆಸೆ ಭುವಿಯಲ್ಲಿ ಹುಟ್ಟುತ್ತದೆ. ಆದರೆ ಅನು ಅದಕ್ಕೆ ಪ್ರತಿಕ್ರಿಯಿಸಿ ಆ ವ್ಯಕ್ತಿಯೊಂದಿಗೆ ನಡೆದು ತನ್ನ ಆಸೆಯ ಬೆನ್ನು ಹತ್ತುತ್ತಾಳೆ. ಭುವಿಗೆ ಸಂಕಟವಾಗುತ್ತದೆ, ಏನೋ ಕಳೆದುಕೊಂಡಂತೆ ,ಯಾರೋ ತನ್ನಿಂದ ಏನೋ ಕಿತ್ತುಕೊಂಡಂತೆ ಅನಿಸುತ್ತದೆ. ಮತ್ತೆ ಆಕೆ ತಾನು ನೆಡೆಯುತ್ತಿದ್ದ ಯಾವುದೋ ದುರಂತದಿಂದ ಪಾರಾದಂತೆಯೂ ಭಾವಿಸುತ್ತಾಳೆ. ಪ್ರಶ್ನೆ ಮತ್ತು ಬಯಕೆ ಯೌವ್ವನದ ಹುಚ್ಚು ಮನಸ್ಸಿನ ಓಟವನ್ನು ಈ ಕಥೆಯು ಬಿಂಬಿಸುತ್ತದೆ.

'ಒಗಟು' ಕಥೆಯಲ್ಲಿ ಒಂದು ಹೆಣ್ಣಿನ ಶಾಂತವಾದ ಬದುಕಿನ ಒಳಗೆ ಬೇಧಿಸಲಾಗದ ಒಗಟಿನ ಚಿತ್ರಣವಿದೆ. ಸದಾ ಮನೆಯಲ್ಲಿಯೇ ಇರಲು ಬಯಸುವ ಹೆಣ್ಣು, ಸಂಸಾರವನ್ನು ಸರಿಯಾಗಿ ತೂಗಿಸುವ ಹೆಣ್ಣು , ಎಲ್ಲರ ವಿಶ್ವಾಸ ಗಳಿಸಿರುವ ಹೆಣ್ಣು ಇದ್ದಕ್ಕಿದ್ದಂತೆ ನಿಗೂಡವಾಗಿ ಪ್ರಯಾಣಿಸುತ್ತಾಳೆ. ತನ್ನ ಊರಿನಲ್ಲಿ ಬಂದು ಮನೆಮಾಡಿಕೊಂಡು ನೆಲೆಸಿದ ಹುಡುಗಿಯ ಮನೆಗೆ ಬರುವುದಲ್ಲದೆ, ತಾನೊಬ್ಬಳೇ ಹೊರಗಡೆ ಸುತ್ತಾಡಿ ಬರುತ್ತಾಳೆ. ಆ ಹುಡುಗಿಗೂ ತನ್ನ ಗುಟ್ಟನ್ನು ಬಿಟ್ಟುಕೊಡುವುದಿಲ್ಲ. ಆಕೆಯ ಮೌನ, ನಗು ಮತ್ತು ಶಾಂತತೆ ಎಲ್ಲವೂ ಒಗಟಾಗಿಯೇ ಉಳಿಯುತ್ತವೆ. 'ತೆರೆಯದ ಪುಟಗಳು' ಕಥೆಯಲ್ಲಿ ಮೂರು ತಲೆಮಾರುಗಳಲ್ಲಿ ಹಂಚಿಕೊಂಡಿರುವ ಸ್ತ್ರೀ ಸಮುದಾಯದ ಭಾವನೆಗಳ ಎರಕವಿದೆ. ರಾಜತ್ತೆಯ ಮನೆಯ ಸಮಾರಂಭಗಳಲ್ಲಿ ಸೇರುವ ಎಲ್ಲ ವಯಸ್ಸಿನ ಹೆಣ್ಣು ಮಕ್ಕಳ ನಗೆಚಾಟಿಕೆಯ ಮಧ್ಯೆ ರಾಜತ್ತೆಯ ವಿಶಾಲ ಹೃದಯದ ಆತಿಥ್ಯದ ಅರಿವಾಗುತ್ತದೆ. ಆಕೆಯ ಜೀವನದ ಪುಟಗಳನ್ನು ಎಲ್ಲರೂ ಬಿಡಿಸಿ ನೋಡಲು ಪ್ರಯತ್ನಿಸಿದರೂ ಅದು ತೆರೆದುಕೊಳ್ಳದೇ ನಿಲ್ಲುತ್ತದೆ. ರಾಜತ್ತೆಯ ವಿವಾಹದ ಹಿಂದೆ ಮುಂದೆ ಸಾಕಷ್ಟು ದುರಂತಗಳು ನಡೆದಿರುವ ಸೂಚನೆ ಸಿಕ್ಕರೂ ರಾಜತ್ತೆ ಯಾವುದನ್ನೂ ತೆರೆಯದೇ ಮುಗಿದ ಕಥೆಯನ್ನು ಮುಗಿಸಿಯೇ ಬಿಡುತ್ತಾಳೆ. ದಿಮಾಕಿನ ರಾಜತ್ತೆ ಮದುವೆಯಾಗಿ ಹೋದವಳು ಗಂಡನನ್ನು ಕಳೆದುಕೊಂಡು ಬಹಳ ವರ್ಷಗಳ ನಂತರ ಊರಿಗೆ ಬರುತ್ತಾಳೆ. ತಂದೆ ತಾಯಿಯ ಒಬ್ಬಳೇ ಮಗಳಾದ ಕಾರಣ ಅವಳೇ ಎಲ್ಲ ಯಜಮಾನಿಕೆಯನ್ನು ತೆಗೆದುಕೊಳ್ಳುತ್ತಾಳೆ. ಗಂಡನನ್ನು ಕಳೆದುಕೊಂಡು ಊರಿಗೆ ಮರಳಿದ ರಾಜತ್ತೆ ಬಹಳ ಬದಲಾಯಿಸಿರುತ್ತಾಳೆ. ಆ ಬದಲಾವಣೆಗೆ ಕಾರಣವಾಗಲೀ, ಅವಳ ಮತ್ತು ಅವಳ ಗಂಡನ ಕಥೆಯನ್ನಾಗಲಿ ಯಾರ ಮುಂದೆಯೂ ಬಿಚ್ಚಿಡುವುದಿಲ್ಲ. ಕೆಟ್ಟು ನಿಂತ ಹಾರ್ಮೋನಿಯಂ ರಾಜತ್ತೆಯ ಕಥೆಯ ಅವಶೇಷವಾಗಿ ಕಾಣಿಸುತ್ತದೆ. ಆದರೆ ಕಥೆಯ ಪುಟಗಳು ಮಾತ್ರ ತೆರೆದುಕೊಳ್ಳುವುದಿಲ್ಲ.'ಕ್ರೌಂಚ ಪಕ್ಷಿಗಳು' ಕಥೆಯಲ್ಲಿ ಸ್ವತಂತ್ರ ಹೋರಾಟದ ಸಂದರ್ಭದಲ್ಲಿ ನಡೆಯುತ್ತಿದ್ದ ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯವನ್ನು ಚಿತ್ರಿಸಿದ್ದಾರೆ. ಗಾಂಧೀಜಿಗೆ ಹತ್ತಿರದವರಾದ ವಿಶಾಖಾ ಬೆನ್ ಅವರು ಸ್ವತಂತ್ರ್ಯಾ ನಂತರವೂ ವಲಸೆ ಜನರ ಪುನರ್ವಸತಿಗಾಗಿ ದುಡಿಯುತ್ತಾರೆ. ಯಾವುದೇ ಅಧಿಕಾರದ ಆಸೆಗೆ ಒಳಪಡದೇ ಮಹಿಳೆಯರ ಸಮಸ್ಯೆಗಳಿಗೆ ಹೋರಾಟ ನಡೆಸುತ್ತಾ ಬದುಕಿದ್ದ ವಿಶಾಖಾ ಬೆನ್ ಅವರ ಸಂದರ್ಶನ ತೆಗೆದುಕೊಳ್ಳಲು ಹೋದ ಇಬ್ಬರು ಸಂಶೋಧನಾ ವಿದ್ಯಾರ್ಥಿಗಳಿಗೆ ದೊರೆತ ಮಾಹಿತಿಗಳು ಸ್ವಾತಂತ್ರ್ಯ ಪೂರ್ವದ ಹೆಣ್ಣುಮಕ್ಕಳ ಪರಿಸ್ಥಿತಿಯ ಚಿತ್ರಣವನ್ನು ನೀಡುತ್ತದೆ. ದೇಶ ವಿಭಜನೆಯ ಸಂದರ್ಭದಲ್ಲಿ ನಡೆದ ಹೆಂಗಸರ ಮೇಲಿನ ಬಲಾತ್ಕಾರ , ದೌರ್ಜನ್ಯ ಮತ್ತು ಅವರ ದಾರುಣ ಜೀವನವನ್ನು ಈ ಕಥೆ ವಿವರಿಸಿದೆ.

ಹೆಣ್ಣಿನ ಅಂತರಂಗದ ತುಡಿತ ಪುರುಷ ಸ್ಪಂದನಕ್ಕಿಂತ ಬೇರೆಯಾಗಿರುತ್ತದೆ. ವೈದೇಹಿ ಅವರು ಹೆಣ್ಣಿನ ಛಲಗಾರಿಕೆ ಸ್ವಾಭಿಮಾನದ ಗಟ್ಟಿ ವ್ಯಕ್ತಿತ್ವವನ್ನು ಚಿತ್ರಿಸಿದ್ದಾರೆ. ಮದುವೆ, ಕುಟುಂಬ ದಾಂಪತ್ಯ ಮೊದಲಾದ ಪರಿಧಿಯೊಳಗೆ ಹೆಣ್ಣಿನ ಸಮಸ್ಯೆಗಳನ್ನು ಹಲಾವಾರು ಮಗ್ಗಲುಗಳಲ್ಲಿ ಲೇಖಕಿ ಕಟ್ಟಿಕೊಡುತ್ತಾರೆ. 'ಗೂಡಿನೊಳಗೊಂದು ಹಕ್ಕಿ' ಕಥೆಯು ವಿವಾಹಿತ ಹೆಣ್ಣಿನ ಸ್ವಾತಂತ್ರ್ಯದ ಹಂಬಲವನ್ನು ವಿವರಿಸುತ್ತದೆ. ಇಲ್ಲಿ ಹೆಣ್ಣೊಬ್ಬಳು ಗಂಡನ ಬಟ್ಟೆಗಳನ್ನು ಧರಿಸಿಕೊಂಡು ನೋಡಿಕೊಳ್ಳುವುದು, ಗಂಡಿನಂತೆ ಸಿಗರೇಟು ಸೇದಲು ಪ್ರಯತ್ನಿಸುವುದು ಮತ್ತೆ ಎಲ್ಲವನ್ನು ಕಳಚಿ ತನ್ನ ಮಾಮೂಲು ವೇಷ ತೊಡುವುದು ಮಾಡುತ್ತಾಳೆ. ಆಕೆಗೆ ತೊಟ್ಟ ವೇಷವನ್ನು ಬದಲಿಸುವುದು ಕಷ್ಟ, ಹೆಣ್ಣಿನ ರೂಢಿಗತ ನಂಬಿಕೆಗಳು ಅಷ್ಟು ಸರಳವಾಗಿ ಬದಲಾವಣೆಗೆ ಒಳಪಡುವುದಿಲ್ಲ ಎಂದು ಅರ್ಥವಾಗುತ್ತದೆ. ಅಕ್ಕು ಮತ್ತು ಚಂದಲೆ ಕಥೆಗಳನ್ನು ವಿಭಿನ್ನ ನೆಲೆಯಲ್ಲಿಯೇ ಗ್ರಹಿಸಬೇಕಾಗಿದೆ. ಮದುವೆಯಾದರೂ ಸಾಂಸಾರಿಕ ಸುಖವಿಲ್ಲದೇ ಪರಿತಪಿಸುವ ಅಕ್ಕು ಹೆಣ್ಣಿನ ನೋವು ಅಪಮಾನಗಳಿಗೆ ಸಾಕ್ಷಿಯಾಗುತ್ತಾಳೆ. ಹುಚ್ಚಿಯಂತೆ ಅವಳಾಡುವ ಮಾತು ತೋರುವ ಪ್ರತಿಕ್ರಿಯೆಗಳು ಸಮಾಜದ ಧಮನಕಾರಿ ನೀತಿಯನ್ನು ಪ್ರಶ್ನಿಸುತ್ತವೆ. ಕುಂಕುಮ, ಕರಿಮಣಿ ಧರಿಸಿ ತಿರುಗುವ ಅಕ್ಕು ಅವಹೇಳನ ಮಾಡಿದವರನ್ನು ಧೈರ್ಯವಾಗಿ ಎದುರಿಸುತ್ತಾಳೆ. ಸಮಾಜದ ಜನರ ಲೈಂಗಿಕ ಗೋಜಲುಗಳನ್ನು ನೇರವಾಗಿ ಪ್ರಶ್ನಿಸುತ್ತಾಳೆ, ಮತ್ತು ಅಮಾನವೀಯ ನಡತೆಗಳಿಗೆ ಪ್ರತಿಭಟಿಸಿ ನಿಲ್ಲುತ್ತಾಳೆ. ಚಂದಲೆ ಎಂಬ ಹೆಣ್ಣು ಸಮಾಜದ ನೈತಿಕ ನಂಬಿಕೆ ಮತ್ತು ವೇಶ್ಯಾವಾಟಿಕೆಯ ಬದುಕಿನ ಮುಖಾಮುಖಿಯಲ್ಲಿ ನರಳುತ್ತಾಳೆ. ಹೆಣ್ಣಿನ ಮನಸ್ಸಿನ ಬಯಕೆ, ಲೈಂಗಿಕವಾದ ಕುತೂಹಲಕ್ಕೆ ಸಾಕ್ಷಿಯಾಗಿ ಬದುಕಿನ ಸೂಕ್ಷ್ಮ ವಿಚಾರಗಳನ್ನು ಶೋಧಿಸುತ್ತಾಳೆ.

**ಲೇಖನದ ಉಪಸಂಹಾರ:**

ವೈದೇಹಿ ಅವರ ಕಥೆಗಳು ಹೆಣ್ಣುಮಕ್ಕಳನ್ನು ಕೇಂದ್ರವಾಗಿಟ್ಟುಕೊಂಡಿವೆ. ಆಧುನಿಕ ಸಂದರ್ಭದಲ್ಲಿ ಸ್ತ್ರೀ ಕುಲದ ಮೇಲೆ ನಡೆವ ವಿಭಿನ್ನ ರೀತಿಯ ಮಾನಸಿಕ ಮತ್ತು ದೈಹಿಕವಾದ ಬಲತ್ಕಾರವನ್ನು ವಿವರಿಸುತ್ತವೆ. ಮದುವೆ ಕುಟುಂಬ, ದಾಂಪತ್ಯ, ಲೈಂಗಿಕ ಸಂತೃಪ್ತಿಯ ಸಮಸ್ಯೆಗಳು ಮತ್ತೆ ಮತ್ತೆ ವೈದೇಹಿಯವರ ಕಥೆಗಳ ವಸ್ತುವಾಗಿವೆ. ಅವರು ಸ್ತ್ರೀ ಕುರಿತು ಇರುವ ಸಿದ್ಧ ಮಾದರಿ ಕಲ್ಪನೆ, ಗ್ರಹಿಕೆಗಳನ್ನು ನಿರಾಯಾಸವಾಗಿ ಬುಡಮೇಲು ಮಾಡಿ ಸ್ತ್ರೀಯನ್ನು ನಡೆಸಿಕೊಂಡಿರುವ ಅಸಭ್ಯ, ವಿಕೃತ ಲೋಕವನ್ನು ಅನಾವರಣಗೊಳಿಸುತ್ತಾರೆ. ಹೆಣ್ಣು ಗಂಡಿನ ಸಂಬಂಧಗಳನ್ನು ಸೂಕ್ಷ್ಮ ಅವಲೋಕನಕ್ಕೆ ಒಳಪಡಿಸಿ ಒಂದು ತಾತ್ವಿಕ ಆಯಾಮವನ್ನು ವಿಶಾಲಗೊಳಿಸುತ್ತಾ ಎಲ್ಲ ತರಹದ ಪರಿಸ್ಥಿತಿಗಳನ್ನು ಸಾಹಿತ್ಯದ ಮೂಲಕ ದಾಖಲಿಸುವಲ್ಲಿ ಕಥೆಗಾರ್ತಿ ವೈದೇಹಿ ಅವರು ಯಶಸ್ವಿಯಾಗಿದ್ದಾರೆ.

**ಪರಾಮರ್ಶನ ಗ್ರಂಥಗಳು**

1. 'ಕ್ರೌಂಚ ಪಕ್ಷಿಗಳು' ಕಥಾಸಂಕಲನ– ವೈದೇಹಿ, ನಾಲ್ಕನೇ ಮುದ್ರಣ, ಅಕ್ಷರ ಪ್ರಕಾಶನ , ಹೆಗ್ಗೋಡು,ಸಾಗರ, ಕರ್ನಾಟಕ, 2016.
2. 'ವೈದೇಹಿಯವರ ಆಯ್ದ ಕಥೆಗಳು' ಬೆಂಗಳೂರು ವಿಶ್ವವಿದ್ಯಾಲಯ ಪ್ರಸಾರಾಂಗ ಪ್ರಕಟಣೆ, ಬೆಂಗಳೂರು.
3. 'ಸಾಲುದೀಪಗಳು' ಸಂ. ಜಿ ಎಸ್.ಸಿದ್ಧಲಿಂಗಯ್ಯ, ಎಂ.ಎಚ್ ಕೃಷ್ಣಯ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಳೂರು, 2006.
4. 'ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ', ಸಂ. ಬರಗೂರು ರಾಮಚಂದ್ರಪ್ಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಳೂರು, 2006.